1 ನೇ ಹೆಚ್ಚುವರಿ ವಿಶೇಷ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
ಚಿಕ್ಕಮಗಳೂರು

<u>ವಿಶೇಷ ಮೊಕದ್ದಮೆ ನಂಃ **24/2022**</u>

**(The witness appeared through video conferencing from remote point located at the office of Assistant Commissioner of Police, Traffic Sub-Division, Kalaburagi. Sri.Kalyan Reddy, HC 80 attached to said office, who is co-ordinator of said remote point is present with the witness and Smt.Roopa.C.R., Typist, the co-ordinator of court point is also present. Before recording the evidence through Video Conferencing, it is ascertained that the voice is clearly audible and there is no technical defect in recording the evidence of witness through Video Conferencing.)**

| | | |
|---|---|---|
| ಸಾಕ್ಷಿದಾರರ ಹೆಸರು | - ಪ್ರಭು | ಪಿಡಬ್ಲೂ - 21 |
| ತಂದೆಯ ಹೆಸರು | - ದೇವಪ್ಪ | ಸಿಡಬ್ಲೂ - 40 |
| ವಯಸ್ಸು | - 51 ವರ್ಷ | |
| ಉದ್ಯೋಗ | - ಸಹಾಯಕ ಪೊಲೀಸ್ ಆಯುಕ್ತರು, ಸಂಚಾರ ಉಪ-ವಿಭಾಗ, ಕಲಬುರಗಿ | |
| ವಾಸ ಸ್ಥಳ | - ಕಲಬುರಗಿ | |

ದಿನಾಂಕಃ 07-03-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

(ಆರೋಪಿಯು ನ್ಯಾಯಾಂಗ ಬಂಧನದಲ್ಲಿದ್ದು, ಆತನನ್ನು ಈ ದಿನ *Google meet* ನಲ್ಲಿ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಕಾರಾಗೃಹದಿಂದ ಹಾಜರುಪಡಿಸಲಾಗಿರುತ್ತದೆ. ಸಾಕ್ಷಿಯ ವಿಚಾರಣೆಯನ್ನು ದಾಖಲಿಸುವ ಮೊದಲು ಆರೋಪಿಗೆ ಸಾಕ್ಷಿ ಮಾತನಾಡುವುದು ಸರಿಯಾಗಿ ಕೇಳಿಸುತ್ತಿದೆ ಮತ್ತು ವಿಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಸಾಕ್ಷಿಯ ವಿಚಾರಣೆಯನ್ನು ದಾಖಲಿಸಲು ಯಾವುದೇ ತಾಂತ್ರಿಕ ಸಮಸ್ಯೆ ಇಲ್ಲವೆಂದು ಖಾತ್ರಿಪಡಿಸಿಕೊಳ್ಳಲಾಯಿತು.)

<u>ಮುಖ್ಯ ವಿಚಾರಣೆ ವಿಶೇಷ ಸರ್ಕಾರಿ ಅಭಿಯೋಜಕರಿಂದ -</u>

1. ಜುಲೈ 2020 ರಿಂದ ಏಪ್ರಿಲ್ 2022 ರವರೆಗೆ ನಾನು ಚಿಕ್ಕಮಗಳೂರು ಉಪ ವಿಭಾಗದ ಡಿ.ವೈ.ಎಸ್.ಪಿ. ಆಗಿ ಕಾರ್ಯ ನಿರ್ವಹಿಸಿದ್ದೇನೆ.

2. ಈ ಪ್ರಕರಣದ ತನಿಖೆಯನ್ನು ನಡೆಸಲು ಚಿಕ್ಕಮಗಳೂರು ಪೊಲೀಸ್ ವರಿಷ್ಟಾಧಿಕಾರಿಗಳು ದಿಃ 04-02-2022 ರಂದು ನನಗೆ ಆದೇಶಿಸಿದ್ದು, ಸದರಿಯವರ ಆದೇಶವನ್ನು ದಿಃ 11-02-2022 ರಂದು ಪಡೆದುಕೊಂಡೆನು. ಸದರಿ ಆದೇಶವನ್ನು ಮತ್ತು ಅದರಲ್ಲಿರುವ ತನ್ನ ಸ್ವೀಕೃತಿ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಆದೇಶವನ್ನು ನಿ.ಪಿ.56 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.56(ಎ) ಎಂದು ಗುರುತಿಸಲಾಯಿತು. ಅದೇ ದಿನ ಅಂದರೆ ದಿಃ 11-02-2022 ರಂದು ನಾನು ಈ ಪ್ರಕರಣದ ಕಡತವನ್ನು ಫ್ರಾಸಾ.18 ರವರಿಂದ ಪಡೆದು ಪರಿಶೀಲಿಸಿದೆನು.

3. ದಿಃ 12-02-2022 ರಂದು ಫ್ರಾಸಾ.2 ರವರ ಮುಂದುವರೆದ ಹೇಳಿಕೆಯನ್ನು ಪಡೆದುಕೊಂಡೆನು. ಅದೇ ದಿನ ಸಾಕ್ಷಿದಾರರಾದ ಚಾಸಾ.7, ಫ್ರಾಸಾ.4, ಫ್ರಾಸಾ.8 ರಿಂದ 10 ರವರ ಹೇಳಿಕೆಗಳನ್ನು ಪಡೆದುಕೊಂಡೆನು. ನಾನು ಸದರಿ ಸಾಕ್ಷಿದಾರರ ಹೇಳಿಕೆಗಳನ್ನು ಪಡೆಯುವ ಕಾಲಕ್ಕೆ ನನ್ನ ಸೂಚನೆಯ ಮೇರೆಗೆ ಫ್ರಾಸಾ.15 ರವರು ಕಛೇರಿಗೆ ಒದಗಿಸಲಾಗಿದ್ದ ಸೋನಿ ಡಿಜಿಟಲ್ ಹ್ಯಾಂಡಿ ಕ್ಯಾಮೆರದಲ್ಲಿ ಆಡಿಯೋ ಮತ್ತು ವಿಡಿಯೋ ಚಿತ್ರೀಕರಿಸಿದ್ದು, ನಂತರ ಸದರಿ ವಿಡಿಯೋಗಳನ್ನು ನನ್ನ ಸೂಚನೆಯ ಮೇರೆಗೆ ಯಥಾ ಸ್ಥಿತಿಯಲ್ಲಿ ಕಛೇರಿಯಲ್ಲಿದ್ದ ಕಂಪ್ಯೂಟರಿಗೆ ವರ್ಗಾಯಿಸಿ ನಂತರ ಅವುಗಳನ್ನು ಸೋನಿ ಕಂಪನಿಯ ಒಂದು ಖಾಲಿ ಡಿವಿಡಿಗೆ ವರ್ಗಾಯಿಸಿ ಆ ಬಗ್ಗೆ ಭಾರತೀಯ ಸಾಕ್ಷ್ಯ ಅಧಿನಿಯಮ 65(ಬಿ) ರಡಿಯಲ್ಲಿ ದೃಢೀಕರಣ ಪತ್ರದೊಂದಿಗೆ ನೀಡಿರುತ್ತಾರೆ. ಸದರಿ ಡಿವಿಡಿ ಮತ್ತು ದೃಢೀಕರಣ ಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ಈಗಾಗಲೇ ನಿಪಿ.36 ಮತ್ತು ಪಿ.37 ಎಂದು ಗುರುತಿಸಲಾಗಿದ್ದು,

ನಿಪಿ.37 ರಲ್ಲಿರುವ ತನ್ನ ಸ್ವೀಕೃತಿ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಸದರಿ ಸಹಿಯನ್ನು ನಿಪಿ.37(ಬಿ) ಎಂದು ಗುರುತಿಸಲಾಯಿತು.

4. ಅದೇ ದಿನ ಮೃತರ ಜಾತಿ ಪ್ರಮಾಣಪತ್ರವನ್ನು ನೀಡುವಂತೆ ಫ್ರಾಸಾ.11 ರವರಿಗೆ ಮನವಿಯನ್ನು ಸಲ್ಲಿಸಿದ್ದೆನು. ಅಲ್ಲಿಯವರೆಗೆ ಆದ ತನಿಖೆಯಿಂದ ಆರೋಪಿಯ ವಿರುದ್ಧ ಆರೋಪ ಸಾಬೀತಾಗಿದ್ದರಿಂದ ದಿಃ 13-02-2022 ರಂದು ಆತನ ವಿರುದ್ಧ ದೋಷಾರೋಪಣಾ ಪತ್ರವನ್ನು ತಯಾರಿಸಿ ಮೇಲಾಧಿಕಾರಿಗಳಿಗೆ ಸಲ್ಲಿಸಿಕೊಂಡೆನು.

5. ದಿಃ 15-02-2022 ರಂದು ಫ್ರಾಸಾ.11 ರವರು ಮೃತರ ಜಾತಿಯ ಬಗ್ಗೆ ವರದಿಯನ್ನು ಅವರ ತಂದೆಯ ಜಾತಿಪ್ರಮಾಣಪತ್ರದೊಂದಿಗೆ ನೀಡಿದ್ದು, ಅವುಗಳನ್ನು ಕಡತಕ್ಕೆ ಅಳವಡಿಸಿಕೊಂಡೆನು. ಸದರಿ ವರದಿ ಮತ್ತು ಜಾತಿಪ್ರಮಾಣಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ಈಗಾಗಲೇ ನಿಪಿ.25 ಮತ್ತು ಪಿ.26 ಎಂದು ಗುರುತಿಸಲಾಗಿರುತ್ತದೆ. ಅದೇ ದಿನ ನ್ಯಾಯಾಲಯಕ್ಕೆ ಆರೋಪಿಯ ವಿರುದ್ಧ ದೋಷಾರೋಪಣಾ ಪತ್ರವನ್ನು ಸಲ್ಲಿಸಿಕೊಂಡೆನು.

6. ಏಪ್ರಿಲ್ 2022 ರಲ್ಲಿ ನನಗೆ ವರ್ಗಾವಣೆಯಾಗಿರುತ್ತದೆ. ನಂತರದಲ್ಲಿ ಎಫ್.ಎಸ್.ಎಲ್ ವರದಿ ಬಂದಿದ್ದು, ಅದನ್ನು ಆಗಿನ ತನಿಖಾಧಿಕಾರಿಗಳು ಪಡೆದು ನ್ಯಾಯಾಲಯಕ್ಕೆ ಸಲ್ಲಿಸಿಕೊಂಡಿರುತ್ತಾರೆ. ಆದರೆ ಸದರಿ ವರದಿಯನ್ನು ವೈದ್ಯರಿಗೆ ಸಲ್ಲಿಸಿ ಅವರಿಂದ ಮೃತನ ಸಾವಿನ ಬಗ್ಗೆ ಅಂತಿಮ ಅಭಿಪ್ರಾಯ ವರದಿಯನ್ನು ಪಡೆದುಕೊಂಡಿರುವುದಿಲ್ಲ. ನಂತರದಲ್ಲಿ ಅದು ನನ್ನ ಗಮನಕ್ಕೆ ಬಂದ ಬಳಿಕ ದಿಃ 21-02-2026 ರಂದು ನಾನು ಮೃತನ

ಮರಣೋತ್ತರ ಪರೀಕ್ಷೆ ನಡೆಸಿದ್ದ ಪ್ರಾಸಾ.20 ರವರಿಗೆ ಮನವಿಯನ್ನು ಸಲ್ಲಿಸಿ ಅದರೊಂದಿಗೆ ಎಫ್.ಎಸ್.ಎಲ್ ವರದಿಯ ಪ್ರತಿಯನ್ನು ಕಳುಹಿಸಿಕೊಟ್ಟು ಮೃತನ ಸಾವಿನ ಬಗ್ಗೆ ಅಂತಿಮ ಅಭಿಪ್ರಾಯವನ್ನು ತಿಳಿಸುವಂತೆ ಕೋರಿದೆನು. ಆ ಬಗ್ಗೆ ಪ್ರಾಸಾ.20 ರವರು ದಿಃ 22-02-2026 ರಂದು ತಮ್ಮ ಅಂತಿಮ ಅಭಿಪ್ರಾಯ ವರದಿಯನ್ನು ಸಲ್ಲಿಸಿದ್ದು, ಅದನ್ನು ನಾನು ದಿಃ 05-03-2026 ರಂದು ಪಡೆದುಕೊಂಡು ಸಿಬ್ಬಂದಿ ಮೂಲಕ ನ್ಯಾಯಾಲಯಕ್ಕೆ ಸಲ್ಲಿಸಿಕೊಂಡೆನು.

<u>ಪಾಟೀ ಸವಾಲುಃ ಆರೋಪಿಯ ಪರವಾಗಿ ಶ್ರೀ ಪಿ.ಇ.ಎಸ್. ವಕೀಲರಿಂದಃ-</u>

(ಈ ಹಂತದಲ್ಲಿ ವಿಡಿಯೋ ಕಾನ್ಫರೇನ್ಸಿಂಗ್ ಮುಖಾಂತರ ಹಾಜರುಪಡಿಸಿರುವ ಆರೋಪಿಯನ್ನು ಕುರಿತು ಧ್ವನಿ ಕೇಳಿಸುತ್ತಿದೆಯೇ ಎಂದು ಕೇಳಿ, ಕೇಳಿಸುತ್ತಿದೆ ಎಂದು ಖಾತ್ರಿಪಡಿಸಿಕೊಳ್ಳಲಾಯಿತು).

7. ಯಾವುದೇ ಸಂಜ್ಞೆಯ ಅಪರಾಧ ನಡೆದ ಬಗ್ಗೆ ಮಾಹಿತಿ ಬಂದ ಕೂಡಲೇ ಸ್ಥಳಕ್ಕೆ ಭೇಟಿ ನೀಡಬೇಕಾಗುತ್ತದೆ, ಸಾಕ್ಷಿದಾರರ ಹೇಳಿಕೆಗಳನ್ನು ಪಡೆದು ಪ್ರಕರಣವನ್ನು ದಾಖಲಿಸಬೇಕಾಗುತ್ತದೆ, ಹೇಳಿಕೆ ನೀಡಲು ಯಾರು ಮುಂದೆ ಬಾರದ ಪಕ್ಷದಲ್ಲಿ ಪೊಲೀಸರೇ ಖುದ್ದಾಗಿ ಪ್ರಕರಣವನ್ನು ದಾಖಲಿಸಬೇಕಾಗುತ್ತದೆ ಎಂದರೆ ಸಾಕ್ಷಿ ನೀವು ಹೇಳುತ್ತಿರುವುದು ಸರಿ, ಆದರೆ ಮೃತನ ಕಡೆಯವರು ತಾವು ಬಂದು ತಾವೇ ಪ್ರಕರಣವನ್ನು ದಾಖಲಿಸುವುದಾಗಿ ಹೇಳಿದಾಗ ನಾವು ಅವರು ಬರುವವರೆಗೂ ಕಾಯುತ್ತೇವೆ ಎನ್ನುತ್ತಾರೆ. ಆ ಬಗ್ಗೆ ಕರ್ನಾಟಕ ಪೊಲೀಸ್ ಮ್ಯಾನುಲ್‌ನಲ್ಲಿ ನಿಯಮ ಇದೆಯೇ ಎಂದರೆ

ಸಾಕ್ಷಿ ಇಲ್ಲ ಎನ್ನುತ್ತಾರೆ.

8. ಸ್ಥಳಕ್ಕೆ ಭೇಟಿ ನೀಡಿದ ಕೂಡಲೇ ಸ್ಥಳದಲ್ಲಿಯೇ ಶವ ತನಿಖೆಯನ್ನು ನಡೆಸಬೇಕಾಗುತ್ತದೆ ಎಂದರೆ ಸರಿ. ಶವ ಕಂಡ ಕೂಡಲೇ ಅದರ ರಕ್ಷಣೆಗಾಗಿ ಸಿಬ್ಬಂದಿಯನ್ನು ನೇಮಿಸಬೇಕಾಗುತ್ತದೆ ಎಂದರೆ ಸರಿ. ಪ್ರಾಸಾ.18 ರವರು ಎಷ್ಟು ಗಂಟೆಗೆ ಸ್ಥಳಕ್ಕೆ ಹೋದರು ಎಂದರೆ ಸಾಕ್ಷಿ ನನಗೆ ಈಗ ನಿರ್ದಿಷ್ಟವಾಗಿ ಹೇಳಲು ಆಗುವುದಿಲ್ಲ ಎನ್ನುತ್ತಾರೆ. ಈ ಪ್ರಕರಣದಲ್ಲಿ ಶವವನ್ನು ಎಷ್ಟು ಗಂಟೆಗೆ ಆಸ್ಪತ್ರೆಗೆ ತೆಗೆದುಕೊಂಡು ಹೋಗಲಾಯಿತು ಎಂದರೆ ಸಾಕ್ಷಿ ಅದು ಹಿಂದಿನ ತನಿಖಾಧಿಕಾರಿಗಳಿಗೆ ತಿಳಿದಿದೆ ಎನ್ನುತ್ತಾರೆ. ಅಂತಿಮ ವರದಿಯನ್ನು ಸಲ್ಲಿಸುವ ಕಾಲಕ್ಕೆ ನಾನು ಆಸ್ಪತ್ರೆಯಿಂದ Brought Dead Register ಅಥವಾ ಅದರ ಪ್ರತಿಯನ್ನು ಪಡೆದುಕೊಂಡಿಲ್ಲ. ದಿಃ 18-11-2021 ರಂದು ರಾತ್ರಿ 10.45 ಗಂಟೆಗೆ ಶವವನ್ನು ಚಿಕ್ಕಮಗಳೂರಿನ ಜಿಲ್ಲಾ ಆಸ್ಪತ್ರೆಯಲ್ಲಿ ಸ್ವೀಕರಿಸಲಾಗಿದೆ ಎಂದರೆ ಸರಿ. ದಿಃ 18-11-2021 ರಂದು ಪ್ರಾಸಾ.18 ರವರು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯ ಕಾರ್ಯನಿರತ ವೈದ್ಯಾಧಿಕಾರಿಗಳಿಗೆ ಮನವಿಯನ್ನು ಸಲ್ಲಿಸಿ ಶವವನ್ನು ಸದರಿ ಆಸ್ಪತ್ರೆಯ ಶವಗಾರದಲ್ಲಿಡಲು ಅನುಮತಿ ಕೋರಿದ್ದಾರೆ ಎಂದರೆ ಸಾಕ್ಷಿ ಅದನ್ನು ನೀವು ಅವರ ಬಳಿ ಕೇಳಬೇಕು ಎನ್ನುತ್ತಾರೆ.

9. ಸ್ಥಳ ಪಂಚನಾಮೆಯ ಕಾಲಕ್ಕೆ ತೆಗೆದಿದೆ ಎನ್ನಲಾದ ಫೋಟೋ ಮತ್ತು ವಿಡಿಯೋಗಳನ್ನು ನೀವು ಪರಿಶೀಲಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ದಿಃ 12-02-2022 ರಂದು ಪ್ರಾಸಾ.2 ರವರ ಮುಂದುವರೆದ ಹೇಳಿಕೆ, ಚಾಸಾ.7, ಪ್ರಾಸಾ.4, ಪ್ರಾಸಾ.8 ರಿಂದ 10 ರವರ ಹೇಳಿಕೆಗಳನ್ನು ಪಡೆದುಕೊಂಡಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಮರಣೋತ್ತರ ಪರೀಕ್ಷಾ ವರದಿಯನ್ನು ನಾನು

ಪರಿಶೀಲಿಸಿದ್ದೇನೆ. ಸದರಿ ವರದಿಯಲ್ಲಿ ನಮೂದಿಸಿರುವ ಗಾಯಗಳು ಯಾವ, ಯಾವ ಆಯುಧಗಳಿಂದ ಹಲ್ಲೆ ಮಾಡಿದರೆ ಆಗುವ ಸಾಧ್ಯತೆ ಇದೆ ಎಂದು ನೀವು ವೈದ್ಯರಿಂದ ವರದಿಯನ್ನು ಪಡೆದುಕೊಂಡಿದ್ದೀರಾ ಎಂದರೆ ಸಾಕ್ಷಿ ಪ್ರಕರಣದಲ್ಲಿ ಅಮಾನತುಪಡಿಸಿಕೊಂಡಿದ್ದ ವಸ್ತುಗಳನ್ನು ವೈಜ್ಞಾನಿಕ ಪರೀಕ್ಷೆಗಾಗಿ ಎಫ್.ಎಸ್.ಎಲ್ ಗೆ ಕಳುಹಿಸಿ ಕೊಡಲಾಗಿತ್ತು, ನನ್ನ ತನಿಖಾ ಕಾಲದಲ್ಲಿ ಸದರಿ ವಸ್ತುಗಳು ಎಫ್.ಎಸ್.ಎಲ್ ನಿಂದ ಬಂದಿಲ್ಲದ ಕಾರಣ ನಾನು ಅವುಗಳನ್ನು ವೈದ್ಯರಿಗೆ ಸಲ್ಲಿಸಿಕೊಂಡು ಅವರಿಂದ ಗಾಯಗಳ ಬಗ್ಗೆ ವರದಿಯನ್ನು ಪಡೆಯಲು ಸಾಧ್ಯವಾಗಿಲ್ಲ ಎನ್ನುತ್ತಾರೆ. ನಿಮ್ಮ ತನಿಖಾ ಕಾಲದಲ್ಲಿ ಘಟನೆ ನಡೆದಿದೆ ಎನ್ನಲಾದ ಮನೆಗೆ ಭೇಟಿ ನೀಡಿ ಅಲ್ಲಿ ಆರೋಪಿ ಮೃತನೊಂದಿಗೆ ವಾಸವಾಗಿದ್ದನು ಎಂದು ತೋರಿಸಲು ಆರೋಪಿಗೆ ಸೇರಿದ ಯಾವುದಾದರೂ ವಸ್ತುಗಳನ್ನು ಅಮಾನತುಪಡಿಸಿಕೊಂಡಿದ್ದೀರಾ ಎಂದರೆ ಸಾಕ್ಷಿ ಭೇಟಿ ನೀಡಿದ್ದೇನೆ, ಆದರೆ ಆರೋಪಿಗೆ ಸೇರಿದ ಯಾವುದೇ ವಸ್ತುಗಳು ಇರಲಿಲ್ಲ ಹಾಗಾಗಿ ಅಮಾನತುಪಡಿಸಿಕೊಂಡಿಲ್ಲ ಎನ್ನುತ್ತಾರೆ.

10. ಸದರಿ ಮನೆಯ ಅಕ್ಕಪಕ್ಕದಲ್ಲಿದ್ದ ಕೂಲಿ ಲೈನ್ ಮನೆಗಳಲ್ಲಿ ವಾಸವಾಗಿದ್ದವರ ಹೇಳಿಕೆಗಳನ್ನು ಪಡೆದುಕೊಂಡಿದ್ದೀರಾ ಎಂದರೆ ಸಾಕ್ಷಿ ಎಸ್ಟೇಟಿನ ಮಾಲೀಕರು ಮತ್ತು ಮ್ಯಾನೇಜರರವರ ಹೇಳಿಕೆಗಳನ್ನು ಪಡೆದುಕೊಂಡಿದ್ದೇನೆ, ಆದರೆ ಕೂಲಿ ಕೆಲಸಗಾರರ ಹೇಳಿಕೆಗಳನ್ನು ಪಡೆದುಕೊಂಡಿಲ್ಲ ಎನ್ನುತ್ತಾರೆ. ತನಿಖೆಯಲ್ಲಿ ಆರೋಪಿಯ ವಿರುದ್ಧ ಯಾವುದೇ ಸಾಕ್ಷ್ಯಧಾರ ಕಂಡುಬಾರದೇ ಇದ್ದರೂ ಸಹ ಆತನ ವಿರುದ್ಧ ಸುಳ್ಳು ದೋಷಾರೋಪಣಾ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲ.</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ